ಹುಚ್ಚು ನಾಯಿ ಕಡಿತಕ್ಕೆ ಚಿಕಿತ್ಸೆಗಾಗಿ ನೀಡುವ ಚುಚ್ಚುಮದ್ದಿಗೆ ವಿಧಿಸುತ್ತಿರುವ ಶುಲ್ಕ

166 (801) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಚ್ಚುನಾಯಿ ಕಡಿತಕ್ಕೆ ಬಳಸುತ್ತಿರುವ ಚುಚ್ಚುಮದ್ದನ್ನು ಬೇಡಿಕೆಗನುಗುಣವಾಗಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆಯೇ? ಚುಚ್ಚುಮದ್ದನ್ನು ಬಳಸಿಕೊಂಡವರಿಗೆ ನಿಗಧಿಪಡಿಸಲಾಗಿರುವ ಶುಲ್ಕ ಹಣವೆಷ್ಟು?

ಆ) ಬಿ.ಪಿ.ಎಲ್. ಪಟ್ಟಿಯಲ್ಲಿರುವವರಿಗೆ ಮಾತ್ರ ಉಚಿತವಾಗಿ ಒದಗಿಸಿಕೊಡುವ ಮತ್ತು ಇತರರಿಗೆ ಶುಲ್ಕ ವಿಧಿಸುವ ಸರ್ಕಾರದ ನೀತಿಯು ಸಮಂಜಸವೇ? ಹುಚ್ಚುನಾಯಿ ಕಡಿತಕೊಳ್ಳಗಾದವರಿಗೆ ಚುಚ್ಚುಮದ್ದನ್ನು ಉಚಿತವಾಗಿ ಒದಗಿಸಿಕೊಡುವುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಆರ್. ಅಶೋಕ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹುಚ್ಚುನಾಯಿ ಕಡಿತಕ್ಕೆ ಬಳಸುವ ಚುಚ್ಚುಮದ್ದನ್ನು ಆಸ್ಪತ್ರೆಗಳ ಬೇಡಿಕೆಗನುಗುಣವಾಗಿ ಸರಬರಾಜು ಮಾಡಲಾಗುತ್ತಿದೆ. ಆದರೆ ಕೆಲವು ಆಸ್ಪತ್ರೆಗಳಲ್ಲಿ ಅನಿರೀಕ್ಷಿತವಾಗಿ ನಾಯಿಗಳ ಕಡಿತಕ್ಕೊಳಗಾದ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದು, ಆಸ್ಪತ್ರೆಗಳಿಗೆ ಒದಗಿಸಿದ ಚುಚ್ಚುಮದ್ದುಗಳು ಮುಕ್ತಾಯವಾಗಿದ್ದು, ಅಂತಹ ಆಸ್ಪತ್ರೆಗಳಿಗೆ ಹೆಚ್ಚಿನ ಚುಚ್ಚುಮದ್ದುಗಳನ್ನು ಪೂರೈಸಲು ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಅ) ಬಿ.ಪಿ.ಎಲ್. ಕಾರ್ಡುದಾರರಿಗೆ ಉಚಿತವಾಗಿ ಚುಚ್ಚುಮದ್ದನ್ನು ಪೂರೈಸಲಾಗುತ್ತಿದೆ.

ಆ) ಎ.ಪಿ.ಎಲ್. ಕಾರ್ಡುದಾರರಿಂದ ಎ.ಆರ್.ವಿ. ಚುಚ್ಚುಮದ್ದು ಹಾಕಿದ ಬಗ್ಗೆ ರೂ. 100 ನ್ನು ಪ್ರತಿ ರೋಗಿಯಿಂದ ವಸೂಲಿ ಮಾಡಲಾಗುತ್ತಿದೆ.

ಆ) ಸರ್ಕಾರದ ಆದೇಶದಂತೆ ಎ.ಪಿ.ಎಲ್. ಕಾರ್ಡುದಾರರಿಂದ ಕೇವಲ ರೂ. 100 ನ್ನು ವಸೂಲು ಮಾಡಲಾಗುತ್ತಿದೆ (ಮಾರುಕಟ್ಟೆ ಬೆಲೆ ರೂ. 320 ಇರುತ್ತದೆ) ಈ ರೀತಿ ವಸೂಲಿಯಿಂದ ಆಸ್ಪತ್ರೆಗೆ ಬಳಕೆದಾರರ ಶುಲ್ಕ ಬರುತ್ತಿದ್ದು, ಇದನ್ನು ರೋಗಿಗಳ ಹಿತದೃಷ್ಟಿಯಿಂದ ತುರ್ತುಸಂದರ್ಭಗಳಲ್ಲಿ ಅಗತ್ಯ ಔಷಧಿಗಳು ಮತ್ತು ಇತರೆ ಆಸ್ಪತ್ರೆ ವೆಚ್ಚಗಳಿಗೆ ಭರಿಸಲು ಹಾಗೂ ಆಸ್ಪತ್ರೆ ಅಭಿವೃದ್ಧಿಗೆ ಅನುಕೂಲವಾಗುತ್ತದೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ : ಮಾನ್ಯ ಸಚಿವರು ನಾನು ಕೇಳಿರುವ (ಅ) ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಗ್ರಾಮಾಂತರ ಪ್ರದೇಶವಾದ ಬಂಟ್ವಾಳ ತಾಲ್ಲೂಕಿನಲ್ಲಿ ಸುಮಾರು 10 ರಿಂದ 15 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಈ ಆರೋಗ್ಯ ಕೇಂದ್ರಗಳಲ್ಲಿ ಚುಚ್ಚು ಮದ್ದು ಇರುವುದಿಲ್ಲ. ಮಾತ್ರವಲ್ಲ, ತಾಲ್ಲೂಕು ಕೇಂದ್ರಗಳಲ್ಲಿರುವಂಥ ಸಮುದಾಯ ಆಸ್ಪತ್ರೆಗಳಲ್ಲೂ ಕೂಡ ಕೆಲವು ಕೆಲವೊಮ್ಮೆ ಇರುವುದಿಲ್ಲ. ಹಾಗಾಗಿ, ಹೆಚ್ಚು ಚುಚ್ಚುಮದ್ದು ಮತ್ತು ಈ ಔಷಧಿಯನ್ನು ಪೂರೈಕೆ ಮಾಡಬೇಕೆಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಬಡತನ ರೇಖೆಗಿಂತ ಕೆಳಗಿದ್ದವರಿದ್ದಾರೆ, ಧರ್ಮಾರ್ಥವಾಗಿ ಈ ಚುಚ್ಚು ಮದ್ದನ್ನು ಕೊಡುವಂಥದ್ದು, ಉಳಿದವರಿಗೆ ಇದಕ್ಕೆ ದರವನ್ನು fix ಮಾಡುವಂಥದ್ದನ್ನು ಈಗ ಸರ್ಕಾರ ಮಾಡುತ್ತಿದೆ. BPL ಪಟ್ಟಿಯಲ್ಲಿರುವವರಿಗೆ ಧರ್ಮಾರ್ಥವಾಗಿ, ಉಳಿದವರಿಗೆ 100 ರೂಪಾಯಿಗಳನ್ನು ಪಡೆದುಕೊಳ್ಳಲಾಗುತ್ತಿದೆ ಎಂದು ಹೇಳಿ ಸನ್ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹುಚ್ಚು ನಾಯಿ ಕಚ್ಚುವಂಥ ಸಂದರ್ಭದಲ್ಲಿ ಅದು BPL ಪಟ್ಟಿಯಲ್ಲಿ ಸೇರದಂಥ ಕಡು ಬಡವರಿದ್ದಾರೆ. ಈ ಚುಚ್ಚು ಮದ್ದನ್ನು ಎಲ್ಲರಿಗೂ ಕೂಡ ಉಚಿತವಾಗಿ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ರಾಜ್ಯದಲ್ಲಿ ಹುಚ್ಚು ನಾಯಿ ಕಡಿತಕ್ಕೆ ಔಷಧ ಕೊರತೆ ಬಂದಿಲ್ಲ. ಆ ರೀತಿಯಾದಂಥ ಕೊರತೆ ಬಂದಂಥ ಸಂದರ್ಭದಲ್ಲಿ ನಮ್ಮ Health department ಈಗಾಗಲೇ 2,50,970 vials ಅಂದರೆ ಸುಮಾರು 5 ಕೋಟಿ 20 ಲಕ್ಷ ರೂಪಾಯಿಗಳ ಔಷಧಿಯನ್ನು ಖರೀದಿ ಮಾಡಿ ಅದನ್ನು ವಿತರಣೆ ಮಾಡಿದ್ದೇವೆ. ಹುಚ್ಚು ನಾಯಿ ಕಡಿತ ರಾಜ್ಯದಲ್ಲಿ ವರ್ಷ ವರ್ಷ ಜಾಸ್ತಿಯಾಗುತ್ತಿದೆ. 2001ನೇ ಇಸವಿಯಲ್ಲಿ 1 ಲಕ್ಷದ 150 ಜನರಿಗೆ ಹುಚ್ಚು ನಾಯಿ ಕಡಿತವಾಗಿತ್ತು. 2002ರಲ್ಲಿ 1 ಲಕ್ಷದ 14 ಸಾವಿರದ 598 ಆಗಿದೆ. 2003ರಲ್ಲಿ 1 ಲಕ್ಷದ 37 ಸಾವಿರದ 245 ಆಗಿದೆ. 2004ರಲ್ಲಿ 1 ಲಕ್ಷದ 62 ಸಾವಿರದ 444 ಆಗಿದೆ. 2005ರಲ್ಲಿ 1 ಲಕ್ಷದ 69 ಸಾವಿರದ 259 ಜನರಿಗೆ ಹುಚ್ಚು ನಾಯಿ ಕಡಿತವಾಗಿದೆ. ಅಂದರೆ, ಇದು ವರ್ಷ ವರ್ಷ ಜಾಸ್ತಿಯಾಗಿದೆ. ಆ ದೃಷ್ಟಿಯಿಂದ ಈಗಾಗಲೇ ನಮ್ಮ medical education department ನವರು ಅವರ ಆಸ್ಪತ್ರೆಗಳಿಗೆ ಖರೀದಿ ಮಾಡಿರತಕ್ಕಂಥ ಔಷಧಿಗಳನ್ನೂ ಸಹ ನಾವು ತೆಗೆದುಕೊಂಡು ಸುಮಾರು 80 ಲಕ್ಷ vials ಅನ್ನು ನಾವು ತೆಗೆದುಕೊಂಡು ಅದರಲ್ಲಿ ಈಗಾಗಲೇ 37,500 VIALS ಅನ್ನು ಎಲ್ಲಾ ನಮ್ಮ ಆರೋಗ್ಯ ಕೇಂದ್ರಗಳಿಗೆ ಕೊಟ್ಟಿದ್ದೀರಿ ಈಗ ಹಾಲಿ ನಮ್ಮ ಆರೋಗ್ಯ ಇಲಾಖೆಯಲ್ಲಿ 42,500 vials injection ದಾಸ್ತಾನಿನಲ್ಲಿದೆ. ಆ ದೃಷ್ಟಿಯಿಂದ ಈ ಚುಚ್ಚು ಮದ್ದು ಕೊರತೆ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಈ ಮೂಲಕ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಅದೇ ರೀತಿ, ಈಗೇನು ಅವರು ಕೇಳಿದ್ದಾರೆ, ಈ ಹುಚ್ಚು ನಾಯಿ ಕಡಿತಕ್ಕೆ ಔಷಧವನ್ನು BPL ದಾರರನ್ನು ಬಿಟ್ಟು ಬೇರೆಯವರಿಗೂ ಕೊಡಬೇಕೆನ್ನುವ ಮಾತನ್ನು ಅವರು ಹೇಳಿದ್ದಾರೆ. ಸರ್ಕಾರಿ ಔಷಧಿಗಳನ್ನು BPL ಪಟ್ಟಿಯಲ್ಲಿರುವವರಿಗೇ ಕೊಡಬೇಕೆನ್ನುವ ಒಂದು ಮಾರ್ಗದರ್ಶಿ ಸೂತ್ರ ನಮ್ಮಲ್ಲಿರುವುದರಿಂದ ಇದನ್ನು BPL ನವರಿಗೆ ಮಾತ್ರ ಕೊಡುತ್ತಿದ್ದೇವೆ. ಏಕೆಂದರೆ, ಹುಚ್ಚು ನಾಯಿ ಕಡಿತಕ್ಕೆ ಇದರ ಖರ್ಚು ಮಾರ್ಕೆಟ್‌ನಲ್ಲಿ ಸುಮಾರು 380 ರೂಪಾಯಿ ಬರುತ್ತದೆ. ಅದನ್ನು ನಾವು department ನಲ್ಲಿ 230 ರೂಪಾಯಿಗಳಿಗೆ purchase ಮಾಡುತ್ತಿದ್ದೇವೆ. BPL ಪಟ್ಟಿಯಲ್ಲಿ ಯಾರಿಲ್ಲ, ಅವರಿಂದ 100 ರೂಪಾಯಿ ಮಾತ್ರ collect ಮಾಡುತ್ತೇವೆ. 100 ರೂಪಾಯಿಗಳು ನಮ್ಮ ಇಲಾಖೆಗೇನೂ ಬರುವುದಿಲ್ಲ. ಅದನ್ನು ಅಲ್ಲಿಯ ಆಸ್ಪತ್ರೆಯ department ನಲ್ಲಿ users fund ಎಂದೇನಿದೆ ಅದರಲ್ಲಿಟ್ಟಿರುತ್ತೀರಿ. ಯಾರಾದರೂ accidents ಸಂದರ್ಭ ಇರಬಹುದು, ಬೇರೆ ಬೇರೆ ಸಂದರ್ಭದಲ್ಲಿ ಔಷಧಿ ಖರೀದಿಗೋಸ್ಕರ ಈ

ಹಣವನ್ನು reserve ಮಾಡುವ ದೃಷ್ಟಿಯಿಂದ ಈ 100 ರೂಪಾಯಿಗಳನ್ನು ಮಾತ್ರ ಅವರಿಂದ collect ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಯಾವುದೇ ಆಸ್ಪತ್ರೆಗಳಲ್ಲಿ ಹುಚ್ಚು ನಾಯಿ ಕಡಿತಕ್ಕೆ ಸಂಬಂಧಪಟ್ಟ ಔಷಧಿ ಇದೆ. ಈಗಾಗಲೇ ಅದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡಿದೆ. ಈಗೇನು ಕಡಿತಕ್ಕೊಳಗಾಗಿರುವವರು ಯಾರಿದ್ದಾರೆ ಅವರಿಗೆ ಉಚಿತವಾಗಿ ಕೊಡುತ್ತಿದ್ದೀರಿ, ಯಾರು BPL ಪಟ್ಟಿಯಲ್ಲಿಲ್ಲ ಅವರಿಗೆ 100 ರೂಪಾಯಿಗಳಿಗೆ ಕೊಡಬೇಕಾಗಿತ್ತು. ಅದು ಕಡ್ಡಾಯ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ : ಇದು ಬಹಳ ಪ್ರಮುಖವಾದ ವಿಷಯ. ಏಕೆಂದರೆ ಬಿ.ಪಿ.ಎಲ್. ಪಟ್ಟಿಯಲ್ಲಿರುವ ಜನ ತಿರಾ ಕಡಿಮೆ. ಬಿ.ಪಿ.ಎಲ್. ಪಟ್ಟಿಯಲ್ಲಿ ಸೇರದ ಬಹಳಷ್ಟು ಬಡ ಜನರಿದ್ದಾರೆ. ಅಂಥ ಸಂದರ್ಭದಲ್ಲಿ ಸರ್ಕಾರ ಇಷ್ಟೆಲ್ಲಾ ಬೇರೆ ಬೇರೆ ಕಾರ್ಯಕ್ರಮಗಳನ್ನು ಧರ್ಮಾರ್ಥವಾಗಿ, ಉಚಿತವಾಗಿ ಬೇರೆ ಬೇರೆ ಇಲಾಖೆಗಳ ಮೂಲಕ ಒದಗಿಸುವಂಥ ಕಾರ್ಯಕ್ರಮವಿದೆ. ಹುಚ್ಚು ನಾಯಿ ಕಡಿತಕ್ಕೆ ಚುಚ್ಚುಮದ್ದಿಗೆ ಬಡವರಿಂದ ನೂರು ರೂಪಾಯಿಕೊಳ್ಳದೆಯೇ ಉಚಿತವಾಗಿ ಕೊಡಬೇಕೆಂಬುದು ನನ್ನ ವಿನಂತಿ. ಮಾನ್ಯ ಸಚಿವರು ಮತ್ತು ಸರ್ಕಾರ ಅದನ್ನು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಹುಚ್ಚು ನಾಯಿಯದ್ದು ಎಲ್ಲಾ ಕಡೆ ಕಾಟ ಇದೆ. ಪ್ರಾಣಿದಯಾ ಸಂಘದ ತೊಂದರೆಯಿಂದಾಗಿ ಹುಚ್ಚು ನಾಯಿಯನ್ನು ನಾಶ ಮಾಡುವುದಕ್ಕೆ ಬಿಡುತ್ತಿಲ್ಲ. ಬೀದಿ ತುಂಬ ನಾಯಿಗಳಾಗಿದೆ ಒಂದೊಂದು ತಾಲ್ಲೂಕಿನಲ್ಲಿ ಔಷಧಿಯನ್ನು ಒದಗಿಸಲು ಸರ್ಕಾರದ ಖಜಾನೆಯಲ್ಲಿರುವ ಹಣವೇ ಸಾಕಾಗುವುದಿಲ್ಲ. ಆದ್ದರಿಂದ ಆ ನಾಯಿಗಳನ್ನು ನಾಶ ಮಾಡುವುದಕ್ಕೆ ಏನಾದರೂ ಕಾನೂನನ್ನು ತರಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಜಾನುವಾರುಗಳಿಗೆ ಕಡಿಯುತ್ತದೆ, ಅದರ ಹಾಲನ್ನು ಕುಡಿಯುತ್ತಾರೆ, ಇಡೀ ಊರು ಊರೇ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕಾಗಿದೆ. ಇದು ದಿನ ನಿತ್ಯದ ತೊಂದರೆಯಾಗಿದೆ. ನಮ್ಮ ಶಾಸಕರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನಾದರೂ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಶ್ರೀ ಆರ್. ಅಶೋಕ್ : ಈಗಾಗಲೇ ಸುಪ್ರೀಂ ಕೋರ್ಟ್‌ನಿಂದ ಯಾವುದೇ ಶ್ವಾನವನ್ನು ಕೊಲ್ಲಬಾರದು ಎಂಬ ನಿರ್ದೇಶನವಿರುವುದರಿಂದ ಅದನ್ನು ಕೊಲ್ಲುವುದಕ್ಕೆ ಸಾಧ್ಯವಾಗುತ್ತಿಲ್ಲ. ಬಿ.ಪಿ.ಎಲ್. ಪಟ್ಟಿಯಲ್ಲಿ ಇಲ್ಲದೇ ಇರುವವರಿಗೂ ಸಹ ಉಚಿತವಾಗಿ ಚುಚ್ಚುಮದ್ದನ್ನು ಕೊಡಬೇಕೆಂದು ಮಾನ್ಯ ಸದಸ್ಯರೇನು ಕೇಳಿದ್ದಾರೆ, ಈಗಾಗಲೇ ನಾವು ಅಂಥವರಿಗೂ ಸಹ 130 ರೂಪಾಯಿಯ ವಿನಾಯಿತಿಯನ್ನು ಕೊಡುತ್ತಿದ್ದೇವೆ. ಬಿ.ಪಿ.ಎಲ್. ಪಟ್ಟಿಯಲ್ಲಿರುವವರಿಗೆ ಉಚಿತವಾಗಿ; ಬಿ.ಪಿ.ಎಲ್. ಪಟ್ಟಿಯಲ್ಲಿ ಇಲ್ಲದೇ ಇರುವವರಿಗೆ 130 ರೂಪಾಯಿ ಸಬ್ಸಿಡಿ ಕೊಡುತ್ತಿದ್ದೇವೆ. ಮಾರುಕಟ್ಟೆಯಲ್ಲಿ ಇದರ ಬೆಲೆ ಸುಮಾರು 350 ರೂಪಾಯಿ ಇದೆ. ನಾವು ಅವರಿಗೆ ನೂರು ರೂಪಾಯಿ ಮಾತ್ರ ಚಾರ್ಜ್ ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ಇದು ಹೆಚ್ಚಿಗೆ ಎಂದು ಅನ್ನಿಸುವುದಿಲ್ಲ. ಈಗಾಗಲೇ ಅವರಿಗೆ ವಿನಾಯಿತಿ ಕೊಡುತ್ತಿರುವುದರಿಂದ ಮತ್ತೆ ಅವರಿಗೆ ವಿನಾಯಿತಿಯನ್ನು ಕೊಡಲು ಸಾಧ್ಯವಿಲ್ಲ.